ಕೆ.ಎ.ಎಸ್. ಪರೀಕ್ಷೆಗಳನ್ನು ೩ ವರ್ಷಗಳಿಂದ ನಡೆಸದಿರುವ ಬಗ್ಗೆ

೧೪೨೧. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)—ಮಾನ್ಯ ಮುಖ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಕರ್ನಾಟಕ ಲೋಕ ಸೇವಾ ಆಯೋಗದವರು ಕಳೆದ ೩ ವರ್ಷಗಳಿಂದ ಕೆ.ಎ.ಎಸ್. ಪರೀಕ್ಷೆಗಳನ್ನು ನಡೆಸದೆ ಮುಂದೂಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪರೀಕ್ಷೆಗಳನ್ನು ಮುಂದೂಡಲು ಕಾರಣಗಳೇನು ;

(ಇ) ಈ ಪರೀಕ್ಷೆಗಳನ್ನು ಯಾವಾಗ ನಡೆಸಲಾಗುವುದು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(ಅ) ಹೌದು

(ಆ) ಮಿತವ್ಯಯ ಆದೇಶಗಳು ಜಾರಿಯಲ್ಲಿರುವ ಕಾರಣ.

(ಇ) ೧೯೮೮, ೧೯೮೯ ಮತ್ತು ೧೯೯೦ನೇ ಸಾಲಿನ ಆಯ್ಕೆ ಪರೀಕ್ಷೆಗಳನ್ನು ಈ ವರ್ಷ ಎಂದರೆ ೧೯೯೦ರಲ್ಲಿ ನಡೆಸುವ ವಿಷಯವನ್ನು ಪರಿಶೀಲಿಸಲಾಗುತ್ತಿದೆ.

ಧಾರವಾಡ ಗ್ರಾಮಾಂತರಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್‌ರವರ ಕಛೇರಿಯಂ ಪ್ರಾರಂಭ

೧೪೩. ಶ್ರೀ ಪಿ. ಸಿ. ಸಿದ್ದನಗೌಡರ (ಕಲಘಟಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಧಾರವಾಡ ಗ್ರಾಮಾಂತರಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್‌ರವರ ಕಛೇರಿಯನ್ನು ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ ;

(ಆ) ಹಾಗಿದ್ದಲ್ಲಿ ಈ ಕಿಲಸ ಯಾವ ಹಂತದಲ್ಲಿದೆ.

(ಇ) ಸಂಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಪೋಲೀಸ್ ಠಾಣೆಗಳನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಪರಿಶೀಲನೆಯಲ್ಲಿದೆ.

ಹಾಸನ ಡೈರಿ ಸಹಕಾರ ಸಂಘದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಹುದ್ದೆಯಂ ನೇಮಕಾತಿ

೧೪೪. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹಾಸನ ಡೈರಿ ಕೋ ಆಪರೇಟೀವ್ ಸೊಸೈಟಿಗಳ ಯೂನಿಯನ್‌ನಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಹುದ್ದೆ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಕಳೆದ ಆರೇಳು ವರ್ಷಗಳಿಂದ ಈ ಹುದ್ದೆಗೆ ನೇಮಕ ಮಾಡದಿರಲು ಕಾರಣಗಳೇನು

ಡಾ. ಹೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

ಅ) ಹೌದು

ಆ) ಈ ಹುದ್ದೆಯು ದಿನಾಂಕ ೨೨-೭-೧೯೮೮ ರಿಂದ ಮಾತ್ರ ಖಾಲಿ ಇರುತ್ತದೆ. ಈ ಹುದ್ದೆಗೆ ದಿನಾಂಕ ೩೦-೬-೮೮ ರಿಂದ ಒಬ್ಬ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ನೇಮಿಸಲಾಗಿತ್ತು. ಆದರೆ ಅವರ ನೇಮಕಾತಿಯನ್ನು ಒಕ್ಕೂಟದ ಕಾರ್ಯಕಾರಿ ಸಮಿತಿಯು ಒಪ್ಪಿಕೊಳ್ಳಲಿಲ್ಲ. ಈ ಹುದ್ದೆಯನ್ನು ಭರ್ತಿ ಮಾಡುವ ವಿಷಯು ಪರಿಶೀಲನೆಯಲ್ಲಿದೆ.